ಇನ್ನು ಸುಲ್ತಾನ್ ಪುರ ಆಡ್ಡರಸ್ತೆಯಲ್ಲಿ ನಡೆದ ದರೋಡೆ ಪ್ರಕರಣದಲ್ಲಿ ೯.೪೫ರ ಸಮಯದಲ್ಲಿ ೨೦ ಜನ ರಸ್ತೆಗೆ ಆಡ್ಡಲಾಗಿ ಕಲ್ಲು ಇಟ್ಟು ಕೆ. ಎಸ್. ಆರ್. ಟಿ. ಸಿ. ಬಸ್ (ಸಂಖ್ಯೆ ೩೦೩೨) ನಿಲ್ಲಿಸಿ ಗ್ಲಾಸ್ ಹೊಡೆದು ಪ್ರಯಾಣಿಕರಿಂದ ೨೨೧೦ ರೂ. ದರೋಡೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಚಾಲಕನ ಫಿರ್ಯಾದಿ ತೆಗೆದುಕೊಂಡು ೧೫೧ ಗುಣ್ಣೆ ಪ್ರಕಾರ ದಾಖಲು ಮಾಡಿ ಪತ್ತೆ ಕಾರ್ಯ ನಡೆಯುತ್ತಿದೆ. ಬಹುಶಃ ಆ ಬಗ್ಗೆ ಹೆಚ್ಚಿನ ವಿಷಯ ತಿಳಿಸಿದರೆ ಸಹಕಾರಿ ಆಗುತ್ತದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ವಿಷಯ ತಿಳಿಸಿದರೆ ಎನ್ನುವ ಪ್ರಶ್ನೆ ಇಲ್ಲ. ಇದು ನನ್ನ ಕ್ಷೇತ್ರದಲ್ಲಿ ಆಗಿದ್ದು ಬೆಳಗಿನ ತನಕ ನಾನು ಪೋಲೀಸರ ಜೊತೆಯಲ್ಲಿ ತಿರುಗಿದ್ದೇನೆ. ಅಲ್ಲಿ ಪೊಜೆಸಿಕೊಂಡವರು ನೇರವಾಗಿ ನನ್ನ ಮನೆಗೆ ಬಂದರು. ಆಗ ನಾನು ಡಕಾಯಿತಿ ಆಗಿರುವುದರ ಬಗ್ಗೆ ಲೈಟ್ಮಿಂಗ್ ಕಾಲ್ ಮಾಡಿ ಪೋಲೀಸಿನವರನ್ನು ಆಲ್ಲಿಗೆ ಕರೆಸಿಕೊಂಡೆ. ಆಲ್ಲಿ ಪೋಲೀಸಿನವರ ಕಾರ್ಯ ನನಗೆ ಇಷ್ಟವಾಗಲಿಲ್ಲ. ಆವರಿಗೆಲ್ಲಾ ದರೋಡೆ ಬಗ್ಗೆ ಕಳ್ಳರನ್ನು ಹೇಗೆ ಟ್ರ್ಯಾಪ್ ಮಾಡಬೇಕೆಂಬ ಬಗ್ಗೆ ಟ್ರೈನಿಂಗ್ ಆಗಿರುತ್ತದೆ. ಆವತ್ತು ಶ್ವಾನ ದಳ, ಗನ್ ಪೋಲೀಸಿನವರನ್ನೇ ಕಳುಹಿಸಿಕೊಟ್ಟಿದ್ದರೆ ಮತ್ತು ರೋಡ್ ಬ್ಲಾಕ್ ಮಾಡಿ ಕೆಲಸ ಮಾಡಿದ್ದರೆ ಆವತ್ತೇ ಅವರನ್ನು ಹಿಡಿಯಬಹುದಾಗಿತ್ತು. ಈ ಬಗ್ಗೆ ಹೇಳಿದರೂ ಕೆಲಸ ಆಗಲಿಲ್ಲ. ಇಂತಹ ಅಧಿಕಾರಿಗಳು ಈ ಇಲಾಖೆಯಲ್ಲಿ ಇರಬಾರದು. ಇವರನ್ನು ಕಿತ್ತು ಇಂಟಲಿಜೆನ್ಸಿಗೋ ಅಥವಾ ಸಿ.ಐ.ಡಿ.ಗೋ ಹಾಕಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಲ್ಲಿ ಕರ್ತವ್ಯಲೋಪ ಮಾಡಿದ್ದಾರೆಂದು ಅರ್ಥವಾಗುತ್ತದೆ. ನಾನು ಇದನ್ನು ವಿಚಾರ ಮಾಡುತ್ತೇನೆ.

ಸಿಯೋಲ್ ಏಶಿಯಾಡ್ ಕ್ರೀಡಾಕೂಟಕ್ಕೆ ಕಳುಹಿಸಲಾದ ಗಣ್ಯರುಗಳು

೪೯ (೧೪೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) ಹಾಗೂ ವೇದಾಂತ ಹೆಬ್ಳಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿಯೋಲ್ ಏಷಾಡ್ ಕ್ರೀಡಾಕೂಟಕ್ಕೆ ರಾಜ್ಯ ಸರ್ಕಾರದಿಂದ ಕಳುಹಿಸಿಕೊಟ್ಟಿರುವ ಮಹನೀಯರ ಹೆಸರು ಹಾಗೂ ಹುದ್ದೆಗಳೇನು?

ಆ) ರಾಜ್ಯ ಸರ್ಕಾರಕ್ಕೆ ಈ ವಿಷಯದಲ್ಲಿ ಬಂದಿರುವ ಒಟ್ಟಾರೆ ಖರ್ಚಾದ ಮೊತ್ತವೆಷ್ಟು?

ಇ) ಸಿಯೋಲ್ ಕ್ರೀಡಾ ಕೂಟದಲ್ಲಿ ಭಾಗವಹಿಸಿರುವ ಕ್ರೀಡಾಕೂಟದ ಮಹನೀಯರಿಗೆ ಪೂರ್ಣ ಹಣ ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕ್ರೀಡಾಪಟುಗಳಿಗೆ ಕೊಡಬೇಕಾಗಿರುವ ಹಣವನ್ನು ಸಮಯಾನುಸಾರ ಕೊಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಶ್ರೀ ಬಿ.ಎಸ್. ರಾಘವನ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು; ಮತ್ತು ಶಾಸಕರುಗಳಾದ :

ಶ್ರೀ ಕೆ.ಯು. ಜಾರ್ಜ್
ಶ್ರೀ ಎಸ್.ಸಿ. ಮಲ್ಲಿಗಿ
ಶ್ರೀ ಬಿ.ವಿ. ತುಂಗಳ್
ಶ್ರೀ ಡಿ.ಟಿ. ಜಯಕುಮಾರ್
ಶ್ರೀ ಎಸ್. ಚನ್ನಬಸವಯ್ಯ
ಶ್ರೀ ಐ.ಬಿ. ಶಂಕರ್
ಶ್ರೀ ಪಟವಮಕ್ಕಿ ರತ್ನಾಕರ
ಶ್ರೀ ಬಿ.ಐ. ಪಾಟೀಲ್
ಶ್ರೀ ಉಮೇಶ್ ವಿ. ಕಟ್ಟಿ
ಶ್ರೀ ಡಿ.ಬಿ. ಗಂಗಾಧರಪ್ಪ

ಶ್ರೀ ಬಿ. ರಾಯರೆಡ್ಡಿ
ಶ್ರೀ ಪುಂಡಲೀಕರಾವ್ ಶೆಟ್ಟಿ ಬಾ

ಆ) ೨,೪೦,೦೦೦-೦೦ ರೂ.ಗಳು.

ಇ) ಬಂದಿಲ್ಲ.

ಶ್ರೀ ಇ. ನಂಜೇಗೌಡ
ಶ್ರೀ ಯು. ಭೂಪತಿ
ಶ್ರೀ ಸಿ.ಎಂ. ಮಾವಿನ
ಶ್ರೀ ಕೆ.ಪಿ. ಶೆಟ್ಟಿ
ಶ್ರೀ ಬಿ. ಗುರುಪ್ರಸಾದ್
ಶ್ರೀ ಕೆ. ಕೃಷ್ಣಮೂರ್ತಿ
ಶ್ರೀ ಉಸ್ತಾದ್ ಪಿ.ಎಂ.ಎಲ್.
ಶ್ರೀ ರಾಜ ಅಮರಪ್ಪ ನಾಯಕ್
ಶ್ರೀ ಬಿ.ಪಿ. ಅತ್ತೂರ
ಶ್ರೀ ಕೆ. ವೆಂಕಟೇಶ್
ಶ್ರೀ ಕೆ.ಎಸ್. ಮಲಕೇರಿ
ಶ್ರೀ ಕೌಜಲಗಿ ಶಿವಾನಂದ ದಾಮಪ್ಪ

ಈ) ಬಂದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಮೇಲಿನ ಪಟ್ಟಿಯಂತೆ ಹೋಗಬೇಕಾಗಿದ್ದವರಲ್ಲಿ ಶ್ರೀ ಕೌಜಲಗಿ ಶಿವಾನಂದ ದಾಮಪ್ಪನವರು ಹೋಗಿಲ್ಲವಾದ ಕಾರಣ ೨ ಲಕ್ಷ ೪೦ ಸಾವಿರ ರೂಪಾಯಿಗಳಲ್ಲಿ ೨ ಲಕ್ಷ ೩೦ ಸಾವಿರ ರೂಪಾಯಿ ಖರ್ಚು ಆಗಿದೆ. ಒಬ್ಬ ಶಾಸಕನಿಗೆ ೧೦ ಸಾವಿರ ರೂ.ನಂತೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್.—ಅಧ್ಯಕ್ಷರೇ, ಸಿಯೋಲ್ ಏಷಿಯಾಡ್‌ಗೆ ಈ ಮಹನೀಯರನ್ನು ಕಳುಹಿಸಿಕೊಡುವುದಕ್ಕೆ ಯಾವ ಆರ್ಹತೆಯನ್ನು ಪಡೆದುಕೊಂಡು ಕಳುಹಿಸಿದ್ದೀರಿ? ಅವರಿಗೆ ಆ ಯೋಗ್ಯತೆ ಇತ್ತೇ? ಯಾವ ಆಧಾರದ ಮೇಲೆ ತಾವು ಕಳುಹಿಸಿದ್ದೀರಿ? ಅವರನ್ನು ಕಳುಹಿಸಿಕೊಡುವುದಕ್ಕಿಂತಾ ಮುಂಚೆ ಅವರುಗಳನ್ನು ಕಳುಹಿಸಿಕೊಡುವ ಬಗ್ಗೆ ಎಷ್ಟು ದಿವಸಗಳ ಹಿಂದೆ ಸರ್ಕಾರ ನಿರ್ಣಯ ತೆಗೆದುಕೊಂಡಿತು? ಹಾಗೂ ಮಹಿಳೆಯರನ್ನು ಏಕೆ ಕಳುಹಿಸಲಿಲ್ಲ? ಅಲ್ಲಿಗೆ ಹೋದವರಿಗೆ ಅಲ್ಲಿ ಆಟಗಳನ್ನು ನೋಡುವುದಕ್ಕೆ ಪರ್ಮೀಷನ್ ಕೊಟ್ಟಿಲ್ಲ ಎನ್ನುವ ವಿಷಯ ಗಮನಕ್ಕೆ ಬಂದಿದೆ. ತಾವು ಅವರನ್ನು ಕಳುಹಿಸುವ ಕಾಲಕ್ಕೆ ಏನಾದರೂ ಆಟಪಾಠ ಏನಾದರೂ ಆಡಿ ಭಾಗವಹಿಸುವುದಕ್ಕೆ ಏನಾದರೂ ಅನುವು ಮಾಡಿದ್ದೀರಾ? ಶಾಸಕರು ಸಿಯೋಲ್‌ಗೆ ಹೋಗಿ ಬಂದಮೇಲೆ ಸರ್ಕಾರಕ್ಕೆ ವಿಶಿಷ್ಟವಾದ ವರದಿಯನ್ನು ಕೊಟ್ಟಿದ್ದಾರೆಯೇ? ಅವರು ಅಲ್ಲಿ ಏನೇನು ಆಟ ಆಡಿದರು? ಯಾವ್ಯಾವ ಸವಲತ್ತುಗಳು ಅವರಿಗೆ ಸಿಕ್ಕಿತ್ತು? ೨೪ ಜನ ಶಾಸಕರನ್ನು ಕಳುಹಿಸತಕ್ಕ ಸಂದರ್ಭ ಏನಿತ್ತು? ಪತ್ರಿಕಾಕರ್ತರನ್ನು ಕಳುಹಿಸಬೇಕಾಗಿತ್ತು, ಅಧಿಕಾರಿಗಳನ್ನು ಕಳುಹಿಸಬೇಕಾಗಿತ್ತು, ನೀವು ಹೋಗಬೇಕಾಗಿತ್ತು. ಇದನ್ನೆಲ್ಲಾ ಬಿಟ್ಟುಕೊಂಡು ಶಾಸಕರನ್ನೇ ಏತಕ್ಕೆ ಕಳುಹಿಸಿದ್ದೀರಿ? ಇದರ ಹಿನ್ನೆಲೆ ಏನು?

ಶ್ರೀಮತಿ ಮುಕ್ತಾರುನ್ನೀಸಾ.—ಶಾಸಕರನ್ನು ಕಳುಹಿಸುವಾಗ ನೀವು ಎಷ್ಟು ಮಹಿಳಾ ಶಾಸಕರನ್ನು ಕಳುಹಿಸಿದ್ದೀರಿ? ಮಹಿಳೆಯರಲ್ಲಿ ಕ್ರೀಡಾಪಟುಗಳು ಇರಲಿಲ್ಲವೇ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಆಗದೇ ಇರುವುದನ್ನು ಏತಕ್ಕೆ ಮಾಡಲಿಲ್ಲ ವೆಂದು ಕೇಳಿದ್ದಾರೆ. ಸರ್ಕಾರದ ತೀರ್ಮಾನದ ಪ್ರಕಾರ ಶಾಸಕರುಗಳನ್ನು ಇಂಥಾ ಕ್ರೀಡಾಕೂಟಗಳಿಗೆ ಕಳುಹಿಸಿಕೊಟ್ಟರೆ ಅಲ್ಲಿ ನಡೆಯತಕ್ಕ ಕಾರ್ಯಕ್ರಮಗಳನ್ನು ನೋಡಿ ಪ್ರಭಾವಿತರಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೂಡ ಸದರೀ ಕಾರ್ಯಕ್ರಮಗಳ ಬಗ್ಗೆ ಚಿಂತನೆ ಅವರಲ್ಲಿ ಬರಲಿ ಎನ್ನತಕ್ಕ ಒಂದು ಉದ್ದೇಶದಿಂದ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಮಂತ್ರಿಗಳು ಏತಕ್ಕೆ ಹೋಗಲಿಲ್ಲ ಅಂದರೆ ಇಂತಹ ಸಮಯ ಮುಂದೆ ಬರಲಿ, ಅವಕಾಶ ಸಿಕ್ಕಿದರೆ ಮಾನ್ಯ ಮಲ್ಲಾರಿಗೌಡರನ್ನು ಸಹ ಕಳುಹಿಸಿಕೊಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸಿಯೋಲ್‌ಗೆ ಶಾಸಕರುಗಳನ್ನು ಕಳುಹಿಸುವುದಕ್ಕೆ ಬದಲು ಕರ್ನಾಟಕ ರಾಜ್ಯದಲ್ಲಿರತಕ್ಕ ಕ್ರೀಡಾಪಟುಗಳನ್ನು ಆರಿಸಿ ಕಳುಹಿಸಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೇ? ಕ್ರೀಡಾಪಟುಗಳನ್ನು ಆರಿಸುವಾಗ ಯಾವ್ಯಾವ ಸಂಸ್ಥೆಗಳು ಇವೆ ಆ ಸಂಸ್ಥೆಗಳ ಬಗ್ಗೆ ಚರ್ಚೆ ಮಾಡಿದ್ದೀರಾ? ಶಾಸಕರು ಸಿಯೋಲ್‌ಗೆ ಹೋದರು ಆಮೇಲೆ ಅಲ್ಲಿಂದ ಬಂದಮೇಲೆ ಯಾವ್ಯಾವ ಕ್ರೀಡೆ ಕಲಿತುಕೊಂಡಿದ್ದಾರೆನ್ನುವ ವಿವರ ತಿಳಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಕ್ರೀಡಾಪಟುಗಳು ಯಾರ್ಯಾರು ಹೋಗಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ವೇದಾಂತ ಹೆಮ್ಮಿಗೆ ಅವರಿಗೆ ಗೊತ್ತಿಲ್ಲದಿದ್ದರೆ ಪಟ್ಟಿಯನ್ನು ಓದಿ ಹೇಳುತ್ತೇನೆ. ಶಾಸಕರು ಹೋಗಿರತಕ್ಕ ಔಚಿತ್ಯವೇನು ಅನ್ನುವುದಕ್ಕೆ ನಾನು ಆಗಲೇ ಉತ್ತರ ಹೇಳಿದ್ದೇನೆ. ಇಂತಹ ಕೆಲಸವನ್ನು ಮಾಡುವಾಗ ಯೋಜನೆ ಮಾಡಿ ಕೆಲಸ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ನಾವು ಯೋಜನೆ ಮಾಡಿ ಆ ರೀತಿ ಮಾಡಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಕ್ರೀಡಾಪಟುಗಳನ್ನು ಕಳುಹಿಸಲಿಕ್ಕೆ ಪ್ರಯತ್ನ ನಡೆಯಲಿಲ್ಲವೇ? ಕ್ರೀಡಾಪಟುಗಳನ್ನು ಕಳುಹಿಸದೇ ಇದರನ್ನು ಏತಕ್ಕೆ ಕಳುಹಿಸಲಾಯಿತು? ನನ್ನ ಮೂಲ ಪ್ರಶ್ನೆ ಇರತಕ್ಕದ್ದು ಇದು. ಸಿಯೋಲ್ ಎಲ್ಲಿದೆಯೋ ನನಗೆ ಗೊತ್ತಿಲ್ಲ. ಅಲ್ಲಿಗೆ ಹೋಗಿ ಬಂದಿರತಕ್ಕ ಶಾಸಕರುಗಳಿಗೆ ಅದು ಎಲ್ಲಿದೆ ಎನ್ನುವುದು ಗೊತ್ತಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪತ್ರಿಕೆಯಲ್ಲಿ ಕ್ರೀಡಾಪಟು ವಂದನಾರಾವ್ ಎಷ್ಟು ಹಣ ಕೇಳಿದ್ದರೋ ಆಷ್ಟು ಹಣವನ್ನು ಒದಗಿಸಲಿಲ್ಲವೆಂದು ಓದಿದ್ದೇನೆ. ಶಾಸಕರುಗಳು ಸಿಯೋಲ್‌ಗೆ ಹೋಗಿ ಬರುವುದಕ್ಕೆ ಟಿಕೆಟ್‌ಗಾಗಿ ಎಷ್ಟು ಹಣ ಖರ್ಚಾಯಿತು? ಸರ್ಕಾರದಿಂದ ಎಷ್ಟು ಹಣ ಕೊಟ್ಟಿದ್ದೀರಿ? ಅವರು ಎಷ್ಟು ಹಣ ಖರ್ಚು ಮಾಡಿದ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್.—ಏಳು ಜನ ಕ್ರೀಡಾಪಟುಗಳನ್ನು ಕಳುಹಿಸಿಕೊಟ್ಟಿದ್ದೇವೆ. ಅವರ ಹೆಸರುಗಳು ಈ ರೀತಿ ಇವೆ.

೧. ಕು. ವಂದನಾರಾವ್
೨. ಕು. ಅಶ್ವಿನಿ ನಾಚಪ್ಪ
೩. ಕು. ಸುಂದರ್ ರುಬಿನ್
೪. ಶ್ರೀಮತಿ ರೀಟಾ ಅಬ್ರಾಂ
೫. ಕು. ಪೂನೀತ ಗುಪ್ತಾ
೬. ಕು. ಅಸ್ಮಾ ಖಾನ್
೭. ಕು. ಸರೀನ್ ರೀಟಾ

ಕ್ರೀಡಾಪಟುಗಳಿಗೆ ಹಣ ದೊರಕಲಿಲ್ಲವೆಂದು ಹೇಳಿದ್ದಾರೆ, ಅದು ಸರಿಯಲ್ಲ. ಯಾವುದೇ ರೀತಿಯಾದ ದೂರುಗಳು ಬಂದಿಲ್ಲ. ಒಂದು ವಿವರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ವೈಯಕ್ತಿಕವಾಗಿ ಯಾರಿಗೂ ಹಣ ಬಂದಿಲ್ಲ. ಆಯಾ ಪಟುಗಳು ಆಯಾ ಸಂಸ್ಥೆಗಳ ಮುಖಾಂತರ ಅರ್ಜಿಯನ್ನು ಆಸೋಸಿಯೇಷನ್‌ಗೆ ಕಳುಹಿಸಬೆಕು ಕು. ಅಂಥ ಬೇಡಿಕೆಗಳು ಅಥ್ಲೆಟಿಕ್ ಆಸೋಸಿಯೇಶನ್ ನಿಂದ ಬಂದಿಲ್ಲ. ಅದ್ದರಿಂದ ಸರ್ಕಾರಕ್ಕೆ ಮತ್ತು ಈ ಸಂಸ್ಥೆಗೆ ಯಾವ ದೂರುಗಳೂ ಬಂದಿಲ್ಲ. ಆಮೇಲೆ ಸ್ವತಂತ್ರವಾಗಿ ಮಾಡಿದಂಥ ಖರ್ಚು ಅದು ಅವರವರಿಗೆ ಸಂಬಂಧಪಟ್ಟಿದ್ದು. ಅದಕ್ಕೂ ಸರ್ಕಾರಕ್ಕೂ ಏನೂ ಸಂಬಂಧ ಇಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಈ ಶಾಸಕರು ಅಲ್ಲಿಗೆ ಹೋಗಿ ಬಂದಮೇಲೆ ಸರ್ಕಾರಕ್ಕೆ ನಿಶ್ಚಿತ ಮಾದಂಥ ವರದಿಯನ್ನು ಕೊಟ್ಟಿದ್ದಾರೆಯೆ ? ಆಮೇಲೆ ಕೆಲವೊಂದು ಶಾಸಕರಿಂದ ದುರ್ವರ್ತನೆ ನಡೆದಿದೆಯೆಂಬ ವಿಷಯ ತಿಳಿದುಬಂದಿದೆ. ಇದರಿಂದ ರಾಜ್ಯಕ್ಕೆ ಅಪಕೀರ್ತಿ ಉಂಟಾಗಿದೆ. ಆಮೇಲೆ.....

ಅಧ್ಯಕ್ಷರು.—ನೀವು ಸಾಕು ಮಾಡಿರಿ. ವಿಗೆರ್ಯವಾದೇ ನೀವು ಕೇಳಿರಿ.

ಶ್ರೀ ಎಂ. ಎಸ್. ಪಾಟೀಲ್.—ಇಷ್ಟು ದೊಡ್ಡ ಪ್ರಮಾಣದಲ್ಲಿ ಶಾಸಕರಿಗಾಗಿ ಹಣ ಖರ್ಚಾಗಿದೆ. ಇವರು ಹೋಗಿ ಬಂದಮೇಲೆ ವರದಿಯನ್ನು ಕೊಟ್ಟಿದ್ದಾರೆಯೇ ಎಂದು ನಾನು ಕೇಳುತ್ತಿರುವುದು ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅವರಿಂದ ವರದಿಯನ್ನು ನಿರೀಕ್ಷಣೆ ಮಾಡಿರಲಿಲ್ಲ. ವರದಿ ಬಂದಿಲ್ಲ ಮತ್ತು ಅದು ಬರಬೇಕಾಗಿಯೂ ಇಲ್ಲ. ಮತ್ತೆ ಯಾವುದೇ ಶಾಸಕರ ಬಗ್ಗೆ ದುರ್ವರ್ತನೆ ನಡೆದಿರುವ ಬಗ್ಗೆ ಯಾವುದೇ ವಿಧವಾದಂಥ ದೂರುಗಳು ಬಂದಿಲ್ಲ. ಸಂಪೂರ್ಣವಾಗಿ ಈ ಒಂದು ಆಪಾದನೆಯನ್ನು ನಿರಾಕರಣೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಮಾನ್ಯ ಮಲ್ಲಾರಗೌಡ ಪಟೀಲರು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಅವರು ನೇರವಾಗಿ ಕೇಳಿದಂಥ ಪ್ರಶ್ನೆ ಏನೆಂದರೆ ಯಾವ ಆಧಾರದಮೇಲೆ ಎಂ. ಎಲ್. ಎ. ಗಳನ್ನು ಸೆಲೆಕ್ಟ್ ಮಾಡಿದ್ದೀರಿ ? ಆಮೇಲೆ ನೀವು ಕಳಿಸಿದ್ದಂಥ ಶಾಸಕರಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಎಕ್ಸಪರ್ಟ್ಸ್ ಇದ್ದಾರೆಂದು ಕಳಿಸಿದಿರೋ ಅಥವಾ ನೋಡಿಕೊಂಡು ಬರಲಿ ಎಂದು ಕಳಿಸಿದಿರೋ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಎರಡನೆಯದಾಗಿ ಅವರನ್ನು ಕಳಿಸುವುದಕ್ಕಿಂತ ಸಂಬಂಧಪಟ್ಟ ಡೈರೆಕ್ಟೋರೇಟ್‌ನಲ್ಲಿ ಕೆಲಸ ಮಾಡತಕ್ಕಂಥ ಫಿಸಿಕಲ್ ಇನ್‌ಸ್ಟ್ರಕ್ಟರ್‌ಗಳನ್ನು, ಸ್ಪೋರ್ಟ್ಸ್‌ಮನ್‌ಗಳನ್ನು ಕಳಿಸಿದ್ದರೆ ಹೆಚ್ಚಿನ ಪ್ರಯೋಜನ ಆಗುತ್ತಿತ್ತು. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಅಧಿಕಾರಿಗಳನ್ನು ಕೂಡ ಕಳಿಸಿದ್ದೇವೆ. ಇದು ಎರಡನೇ ಪ್ರಶ್ನೆಗೆ ಉತ್ತರ. ಯಾವ ಆಧಾರದ ಮೇಲೆ ಕಳಿಸಿದ್ದೀರೆಂದು ಕೇಳಿದ್ದೀರಿ. ಕ್ರೀಡಾಪಟುಗಳ ಹೆಸರುಗಳನ್ನು ಈಗಾಗಲೇ ಓದಿ ಹೇಳಿದ್ದೇನೆ. ಇವರ ಜೊತೆಗೆ ಅಧಿಕಾರಿಗಳು ಕೂಡ ಕೆಲವರು ಹೋಗಿದ್ದಾರೆ. ಯಾವ ಆಧಾರದ ಮೇಲೆ ಎಂಬುದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಸನ್ಮಾನ್ಯ ಶಾಸಕ ಮಹಾಶಯರು ಇಂತಹ ಕ್ರೀಡಾ ಸಮ್ಮೇಳನಕ್ಕೆ ಹೋದರೆ ಅಲ್ಲಿ ನಡೆಯುವಂಥ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೂಡ ಇಂತಹ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಟೇಡಿಯಂಗಳಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೇ ನಿಮಗೆ ಆಗಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಚಿಕ್ಕ ವ್ಯಾಯಾಮ ಶಾಲೆಗಳನ್ನು ಮಾಡಿ ಬೇಕೆಂದು ಐವತ್ತೈವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಕೊಡುವುದಕ್ಕೇ ಆಗಲಿಲ್ಲ.

ಶ್ರೀ ಜಿ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ; ಇಂತಹ ಕ್ರೀಡೆಗಳಿಗೆ, ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಬಹಳ ವಯಸ್ಸಾಗಿರತಕ್ಕಂಥ ಲೋಕಸಭಾ ಸದಸ್ಯರನ್ನು ಕಳಿಸುವ ಕ್ರೈಟೀರಿಯಾ ಇರುವುದರಿಂದ ಕಳಿಸಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಇದೇನು ಲೋಕಸಭೆಯೋ ವಿಧಾನಸಭೆಯೋ ಗೊತ್ತಾಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ನನ್ನ ಆಕ್ಷೇಪ ಇದೆ. ವಯಸ್ಸಾದವರನ್ನು ಕಳಿಸುವುದಾದರೆ ಜಿ ಹೆಚ್. ಪಟೇಲರನ್ನು, ರಾಚಯ್ಯನವರನ್ನು ಕಳಿಸಬೇಕಾಗಿತ್ತು. ಡೆಲಿಗೇಶನ್ ಅನ್ನು ಇವರುಗಳೇ ಲೀಡ್ ಮಾಡಬೇಕಾಗಿತ್ತು.

ಶ್ರೀ ಜಿ. ಹೆಚ್. ಪಟೇಲ್.—ಒಂದಂತೂ ತಪ್ಪಾಗಿದೆ. ಮಹಿಳೆಯರು ಯಾರಾದರೂ ಹೋಗುವುದಕ್ಕೆ ಅಪೇಕ್ಷೆಪಟ್ಟಿದ್ದರೆ ಕಳಿಸಬಹುದಾಗಿತ್ತು.

ಶ್ರೀಮತಿ ಮುಕ್ತರುತ್ನೀಸಾ ಬೇಗಮ್.—ನಮ್ಮನ್ನು ಕೇಳಲೇ ಇಲ್ಲ. ನಮಗೆ ಗೊತ್ತೇ ಇರಲಿಲ್ಲ.

೧೯೮೫-೮೬ರಲ್ಲಿ ಲೋಕಸೇವಾ ಆಯೋಗವು ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ಸ್ಪರ್ಧಾ ಪರೀಕ್ಷೆಯ ಬಗ್ಗೆ

೫೦ (೨೧೮) (ಬಿ), ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—